

ಡಾ.ವಿನೋದ ಛೆಬ್ಬಿ

ಕಾಮಕೂಟ ಎಂಬುದು ಕಲ್ಪನೆ, ಆಲೋಚನೆ, ವೈಯಕ್ತಿಕತೆ ಹಾಗೂ ಪಾರಸ್ಪರಿಕತೆಗಳು ಬೆರೆತ ಸಂಯುಕ್ತ ಸಂಕೀರ್ಣ.

# 163: ವೈವಾಹಿಕ ಲೈಂಗಿಕತೆ-2

ವಿವಾಹದ ನಂತರ ಕ್ರಮೇಣ ಕಡಿಮೆಯಾಗುತ್ತಿರುವ ಕಾಮಾಸಕ್ತಿಯ ಬಗೆಗೆ ಚರ್ಚಿಸುತ್ತಿದ್ದೇವೆ. ಮದುವೆಯ ಹೊಸದರಲ್ಲಿ ಇರುವ ಕಾಮಾಸಕ್ತಿ ಕ್ರಮೇಣ ಕಡಿಮೆಯಾಗುತ್ತ, ಕಾಮಕೂಟದ ಆವರ್ತನೆಯೂ ಕಡಿಮೆಯಾಗುವುದು ಬಹುಶಃ ಎಲ್ಲ ದಂಪತಿಗಳಿಗೂ ಆಗುವ ಅನುಭವ. ಅದಕ್ಕೆ ಸಾಮಾನ್ಯವಾಗಿ ಹೆಚ್ಚುತ್ತಿರುವ ವಯಸ್ಸು, ಹೊಸತನದ ಕೊರತೆ, ಏಕತಾನೀಯತೆ, ಬಿಡುವಿಲ್ಲದ ದುಡಿತ, ಹೆಚ್ಚಿನ ಜವಾಬ್ದಾರಿ, ವಿಷಾದದ ನಿನ್ನೆಗಳು, ಅನಿಶ್ಚಿತತೆಯ ನಾಳೆಗಳು – ಮುಂತಾದ ಕಾರಣಗಳನ್ನು ಮುಂದೊಡ್ಡುತ್ತೇವೆ. ಇದೆಲ್ಲ ಸರಿಯೆನ್ನಿಸಿದರೂ ಇಲ್ಲೊಂದು ಅರ್ಥವಾಗದಿರುವ ಅಂಶವಿದೆ: ಇವೇ ಸಮಸ್ಯೆಗಳಿರುವ ಇರುವ ಕೆಲವರು ಲೈಂಗಿಕ ಕ್ರಿಯೆಯಲ್ಲಿ ರೋಚಕತೆಯನ್ನು ಉಳಿಸಿಕೊಂಡು ಬರುತ್ತಾರಲ್ಲ, ಅದು ಹೇಗೆ ಸಾಧ್ಯ? ಇದನ್ನು ಈ ಸಲ ಅರ್ಥಮಾಡಿಕೊಳ್ಳೋಣ.

ಕಾಮಕೂಟ ಎಂದರೆ ನಮ್ಮ ಕಣ್ಣ ಕಲ್ಪನೆಯ ಮುಂದೆ ಏನು ಕಾಣುತ್ತದೆ? ಇಬ್ಬರು ಪರಸ್ಪರರನ್ನು ಬಯಸುತ್ತ ಹಸಿಕಾಮದ ಆವೇಶದಿಂದ ಹತ್ತಿರವಾಗುವುದು, ಒಬ್ಬರು ಇನ್ನೊಬ್ಬರಿಗೆ ಮೈ ಒಪ್ಪಿಸುವುದು, ಆಗ ಮೈ ನವಿರೇಳುವ ಸ್ಪರ್ಶ, ರೋಚಕ ಭಾವಗಳ ಕುಣಿತ, ಒಬ್ಬರೊಳಗೆ ಒಬ್ಬರು ಸೇರುವ ತವಕ, ಬಿರುಸಿನ ಉದ್ರೇಕ, ರಭಸದ ಉಸಿರಾಟ, ತುರುಸಿನ ಚಲನೆ. ಉತ್ತುಂಗಕ್ಕೇರಿ ಸ್ಫೋಟಗೊಳ್ಳುವ ಭಾವಪ್ರಾಪ್ತಿ ಹಾಗೂ ಚರಮತೃಪ್ತಿ. ಅದರ ಬೆನ್ನೇರಿ ಇನ್ನೇನೂ ಉಳಿದಿಲ್ಲ ಎನ್ನುವಂತೆ ಬರುವ ಮೈಮನದ ನಿರಾಳತೆ, ಶಾಂತಭಾವ– ಇವೆಲ್ಲ ಒಟ್ಟೊಟ್ಟಾಗಿ ನೆನಪಿಗೆ ಬರುತ್ತವೆ. ಇಲ್ಲೊಂದು ವಿಶೇಷವಿದೆ: ಇದೆಲ್ಲ ಶರೀರಜನ್ಯ– ಅಂದರೆ ಶಾರೀರಿಕ ಅನುಭವ. ಶಾರೀರಿಕವಾಗಿ ನಡೆಯುವುದೇ ಮುಖ್ಯವಾಗುತ್ತದೆ. ಕ್ರಿಯೆಯ ಉತ್ಕೃಷ್ಟತೆಯನ್ನು ಅಳೆಯುವ ಅಳತೆಗೋಲೂ ಅದೇ. ಹಾಗಾಗಿಯೇ ನಿಮಿರುದೌರ್ಬಲ್ಯ, ಶೀಘ್ರಸ್ಖಲನ, ಯೋನಿಸೆಡೆತ, ಉರಿಕೂಟ ಮುಂತಾದುವೆಲ್ಲ ಮುಖ್ಯವಾಗುತ್ತವೆ, ಇವು ಮೈಥುನದ ನಂತರವೂ ತಲೆ ತಿನ್ನುತ್ತವೆ. ಇನ್ನೂ ಹೆಚ್ಚು ಹೊತ್ತು ಶ್ರಮಿಸಿದರೆ ಹೆಚ್ಚು ಸುಖ ಸಿಗಬಹುದಿತ್ತು ಎಂದು ಹಳಹಳಿಗೆ ಕಾರಣವಾಗುತ್ತವೆ. ಸಮಸ್ಯೆಗೆ ಕಾರಣ ಆಗುತ್ತವೆ.

ಮೈಗೆ ಸಂಬಂಧಪಟ್ಟದ್ದನ್ನು ಯೋಚಿಸುವಾಗ ಮೈ ಅತ್ಯಂತ ಗಟ್ಟಿಮುಟ್ಟಾಗಿದ್ದ ಕಾಲ ನೆನಪಾಗುತ್ತದೆ. ಅದೇ ನವತಾರುಣ್ಯ. (ಹದಿವಯಸ್ಸಿಗೆ ಶರೀರ ಇನ್ನೂ ಅದ್ಭುತ ಚೈತನ್ಯ ಹೊಂದಿರುತ್ತದೆ. ಆದರೆ ಆಗ ಲೈಂಗಿಕ ಕ್ರಿಯೆಗೆ ಕಟ್ಟುಪಾಡುಗಳಿವೆಯಲ್ಲ?) ಆಗ ಮೈಯಲ್ಲಿ ಹಾರ್ಮೋನುಗಳು ಹುಚ್ಚೆದ್ದು ಹರಿಯುತ್ತಿರುತ್ತವೆ. ಮೈಮುಟ್ಟಿದ ತಕ್ಷಣ ಕಾಮಕೂಟಕ್ಕೆ ತಯಾರಾಗುವ ಛಾತಿ ಶರೀರಕ್ಕೆ ಇರುತ್ತದೆ. ಬರಬರುತ್ತ ಶರೀರಕ್ಕೆ ವಯಸ್ಸು ಆಗುತ್ತದಲ್ಲ? ಅದಕ್ಕೆ ತಕ್ಕಂತೆ ಕಾರ್ಯಕ್ಷಮತೆ ಕ್ಷೀಣಿಸುತ್ತ ಹೋಗುತ್ತದೆ. ಕ್ಷೀಣಿಸುತ್ತಿರುವ ಶಾರೀರಿಕ ಸಾಮರ್ಥ್ಯಕ್ಕೆ ಅನುಸಾರ ಕಾಮಕೂಟದ ರಾಗತಾಳಗಳು ಬದಲಾಗಬೇಕು. ಅದಾಗದಿದ್ದರೆ ಕಾಮಕೂಟದ ಜುಗಲಬಂದಿಯಲ್ಲಿ ಅಪಸ್ವರ ಇಣುಕುತ್ತದೆ. ಆದರೆ ಮೈಯನ್ನು ಚೆನ್ನಾಗಿ ಇಟ್ಟುಕೊಂಡರೆ ಕಾಮಕೂಟ ಚೆನ್ನಾಗಿರುತ್ತದೆ ಎಂದೇನಲ್ಲ. ಯಾಕೆಂದರೆ ಶರೀರವನ್ನು ಆಳುವ ಮನಸ್ಸು ಅಂತ ಇದೆಯಲ್ಲ?

ಮಾನವರ ವಿಶೇಷ ಏನೆಂದರೆ ಅದ್ಭುತವಾಗಿ ವಿಕಾಸಗೊಂಡಿರುವ ಮೆದುಳು. ಇದರಿಂದ ಕಾಮಕ್ರಿಯೆಯ ವಿಷಯದಲ್ಲಿ ನಾವೆಲ್ಲ ನಮ್ಮ ಶರೀರವನ್ನು ಮೀರಿ ಯೋಚಿಸಬಲ್ಲೆವು. ಹಾಗಾಗಿ ನಮ್ಮ ತಲೆಯಲ್ಲಿ ನಡೆಯುವುದೆಲ್ಲ ನಮ್ಮ ಮೈಯಲ್ಲಿ, ವರ್ತನೆಯಲ್ಲಿ ಪ್ರತಿಫಲಿಸುತ್ತದೆ. ಉದಾ. ಇವನು ದಿನಾಲೂ ಸಂಜೆ ಹೊರಗಿನಿಂದ ಬಂದಕೂಡಲೇ ಅವಳನ್ನು ತಬ್ಬಿಕೊಳ್ಳುತ್ತಾನೆ. ಇಬ್ಬರಿಗೂ ಹುಚ್ಚೆದ್ದು ಅನೇಕ ಸಲ ಸೋಫಾದ ಮೇಲೆಯೇ ಸುಖಪಟ್ಟಿದ್ದಾರೆ. ಅವೊತ್ತು ಎಂದಿನಂತೆ ಅವನು ಆಕೆಯನ್ನು ತಬ್ಬಿಕೊಂಡ. ಆಕೆ ಅವನ ಎದೆಯ ಮೇಲೆ ಒರಗಿದವಳು ಥಟ್ಟನೇ ದೂರಸರಿದು, ಅವನ ಕೆನ್ನೆಗೊಂದು ಏಟುಕೊಟ್ಟಳು. ಏಟು ಜೋರಿಲ್ಲದಿದ್ದರೂ ತಿರಸ್ಕಾರ ಅಸಹನೀಯವಾಗಿತ್ತು. ಅವನು ದಿಗ್ಭ್ರಾಂತನಾಗಿ ಪ್ರಶ್ನಿಸಿದಾಗ ಆಕೆ ಹೇಳಿದ್ದು: ‘ರೀ, ನಿಮ್ಮ ಶರ್ಟಿನಿಂದ ಹೆಂಗಸರು ಉಪಯೋಗಿಸುವ ಸೆಂಟ್ ವಾಸನೆ ಹೊಡೆಯುತ್ತಿದೆ. ನಿಜ ಹೇಳಿ. ಯಾವಳನ್ನು ತಬ್ಬಿಕೊಂಡಿದ್ದಿರಿ?’ ಮುಂದೆ ಏನಾಯಿತು ಎಂಬುದು ಮುಖ್ಯವಲ್ಲ, ಆದರೆ ಅವೊತ್ತಲ್ಲದೆ ಮುಂದಿನ ಕೆಲವು ದಿನಗಳ ತನಕ ಕಾಮಕೂಟ ನಡೆಯದೆ ವಾದವಿವಾದ, ಓಲೈಕೆ–ತಿರಸ್ಕಾರ ಇತ್ಯಾದಿ ಕ್ರಿಯೆ ಪ್ರತಿಕ್ರಿಯೆಗಳೇ ನಡೆದುವು. ಇದರರ್ಥ ಏನೆಂದರೆ, ಶರೀರಗಳು ಮಾತ್ರ ತಯಾರಾದರೆ ಸಾಲದು, ಮನಸ್ಸು ಹಾಗೂ ಸಂದರ್ಭಗಳಲ್ಲಿ ಕಿರಿಕಿರಿ ಎನ್ನಿಸಿದರೂ ಕಾಮಾಸಕ್ತಿ ಮೊಟಕಾಗುತ್ತದೆ.

ಸಮರ್ಪಕ ಕಾಮಕೂಟವು ಮನಸ್ಸನ್ನು ಅವಲಂಬಿಸಿದೆ ಎಂದಾಯಿತು. ಹಾಗಾದರೆ ಮನಸ್ಸು ಸರಿಯಾಗಿ ಇಟ್ಟುಕೊಂಡರೆ ಕಾಮಕೂಟವು ಸರಿಯಾಗಿರಬಹುದೆ? ಹಾಗೆ ಹೇಳಲು ಬರುವುದಿಲ್ಲ. ಉದಾಹರಣೆಗಾಗಿ, ನಾನು ನೋಡಿದ ಸಾವಿರಾರು ಕಾಮನಿರಾಸಕ್ತಿಯ ಪ್ರಕರಣಗಳಲ್ಲಿ ಬಹುತೇಕರು ತಮ್ಮ ಸಂಗಾತಿಯೊಡನೆ ಅತ್ಯುತ್ತಮ ಎನ್ನುವಷ್ಟು ಹೊಂದಿಕೊಂಡಿದ್ದಾರೆ. ಹಾಗಾದರೂ ಅವರ ನಡುವೆ ಕಾಮಕೂಟದ ಪ್ರಸಂಗ ಬಂದಾಗ ಮನಸ್ಸು ಹಿಂದೆಗೆಯುತ್ತದೆ. ಇದು ಹೇಗೆ?

ನಮ್ಮ ಮನಸ್ಸನ್ನು ನಮ್ಮ ವ್ಯಕ್ತಿತ್ವ ಎನ್ನುತ್ತೇವಲ್ಲ, ಅದು ನಿಯಂತ್ರಿಸುತ್ತದೆ. ಈ ವ್ಯಕ್ತಿತ್ವ ಏನೇನನ್ನು ಒಳಗೊಂಡಿದೆ? ನಮ್ಮ ಹುಟ್ಟಿನಿಂದ ಜೀವವಾಹಿಗಳ ಬಳುವಳಿ, ಶೈಶವದಲ್ಲಿ ಹೆತ್ತವರ ಜೊತೆಗಿನ ನಂಟಿನ ನಮೂನೆ, ಹಿರಿಯರು ಕೊಟ್ಟ ಸಂದೇಶಗಳು ಹಾಗೂ ಕಟ್ಟಪ್ಪಣೆಗಳು. ಮನದಾಳದಲ್ಲಿ ಅಡಗಿ ಅರಿವಿಗೆ ಬರದೆ ಆಟವಾಡಿಸುವ ನಾನಾ ಭಾವಗಳು, ಅನಿಸಿಕೆಗಳು, ಸಂವೇದನೆಗಳು. ಬಾಲ್ಯದಲ್ಲಿ ದುರ್ಲಕ್ಷ್ಯ, ಹೀನೈಕೆಯ ಪರಿಣಾಮವಾಗಿ ಉಂಟಾದ ಮಾನಸಿಕ ಗಾಯಗಳು, ಭಾವನಾತ್ಮಕ ಅಥವಾ ಲೈಂಗಿಕ ದುರ್ಬಳಕೆಗೆ ಒಳಗಾದ ಕಹಿ ಅನುಭವಗಳು ಇತ್ಯಾದಿ, ಇದೆಲ್ಲವೂ ಸೇರಿ ‘ಇದು ನಾನು’ ಸ್ವಂತಿಕೆಯ ಕಲ್ಪನೆ ಹುಟ್ಟುತ್ತದೆ. ಇದರೊಡನೆ ಗುರುತಿಸಿಕೊಳ್ಳುತ್ತ ಅಸ್ಮಿತೆ (identity) ಹುಟ್ಟುತ್ತದೆ. ವ್ಯಕ್ತಿತ್ವ ಎನ್ನಿಸಿಕೊಳ್ಳುತ್ತದೆ. ಕಾಮಕೂಟಕ್ಕಾಗಿ ನಮ್ಮ ವ್ಯಕ್ತಿತ್ವವನ್ನೂ ಜೊತೆಗೆ ಒಯ್ಯುತ್ತೇವಷ್ಟೆ? ಆಗ ವ್ಯಕ್ತಿತ್ವದ ನಾನಾ ಘಟಕಗಳೂ ಜೊತೆಗೆ ಕರೆದೊಯ್ಯುತ್ತೇವೆ. ತನುಮನಗಳು ಬೆರೆಯುತ್ತಿರುವಾಗ ಅಸ್ಮಿತೆಯಲ್ಲಿ ಅಂತರ್ಗತವಾದ ನಂಬಿಕೆಗಳು, ಅನಿಸಿಕೆಗಳು, ಅನುಭವಗಳು ಅರಿವಿಲ್ಲದಂತೆ ಸಾಲುಸಾಲಾಗಿ ಹೊರಬರುತ್ತವೆ (‘ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ’ ಎನ್ನುವ ಬೇಂದ್ರೆವಾಣಿ ನೆನಪಾಗುತ್ತದೆ). ಕೆಲವೊಮ್ಮೆ ಸಂಭೋಗವು ಸುಖರೂಪವಾಗಿ ಕೊನೆಗೊಂಡರೂ ಮನಸ್ಸು ‘ಯಾಕೋ’ ಅತೃಪ್ತಿಯಾಗಿ ಇರುವುದಕ್ಕೆ ಇದೇ ಕಾರಣ. ಉದಾಹರಣೆಗಾಗಿ, ಒಬ್ಬಳು ಕಾಮಕೂಟದಲ್ಲಿ ಚುಂಬನ, ಆಲಿಂಗನ, ಸ್ಪರ್ಶ ಎಲ್ಲದಕ್ಕೂ ಮುಂದುವರಿದು ತೆರೆದುಕೊಳ್ಳುತ್ತಿದ್ದಳು. ಸಂಭೋಗಕ್ಕೆ ಬಂದಾಗ ಮುರುಟಿಕೊಳ್ಳುತ್ತಿದ್ದಳು. ಕೇಳಿದರೆ, ನನಗಿಷ್ಟೇ ಸುಖ ಸಾಕು ಎನ್ನುತ್ತಿದ್ದಳು. ಚಿಕಿತ್ಸೆಯಲ್ಲಿ ಕಾರಣ ಬಯಲಿಗೆ ಬಂತು. ಆಕೆ ಎರಡೂವರೆ ವರ್ಷದವಳಿದ್ದಾಗ ಹಲವು ಸಲ ಲೈಂಗಿಕ ದುರ್ಬಳಕೆಗೆ ಒಳಗಾಗಿದ್ದಳು. ಅಷ್ಟು ಚಿಕ್ಕ ವಯಸ್ಸಿನಲ್ಲಿ ತರ್ಕಬುದ್ಧಿ ಬೆಳೆದಿರುವುದಿಲ್ಲ. ಹಾಗಾಗಿ ಚಿಕ್ಕವರು ಕೇವಲ ಭಾವನೆಗಳಿಂದ ಮಾತ್ರ ನಿರ್ಧಾರ (emotional decision) ಕೈಗೊಳ್ಳುತ್ತಾರೆ. ಗಂಡ ಆಕೆಯ ತೊಡೆಸಂದನ್ನು ಮುಟ್ಟಲು ಹೋದಾಗಲೆಲ್ಲ ಆ ಸ್ಪರ್ಶದ ಜೊತೆಗೆ ಅಹಿತಕರ ಭಾವನೆಯು ಅರಿವಿಲ್ಲದಂತೆ ಹೊರಬರುತ್ತ ಕಾಮಕೂಟ ಸಾಕೆನ್ನಿಸುತ್ತಿತ್ತು.

ಇದರಿಂದ ಏನು ಗೊತ್ತಾಗುತ್ತದೆ? ಕಾಮಕೂಟ ಎಂದರೆ ಕೇವಲ ಶಾರೀರಿಕ ಕ್ರಿಯೆಯಲ್ಲ, ಅದೊಂದು ಕಲ್ಪನೆ, ಆಲೋಚನೆ, ವೈಯಕ್ತಿಕತೆ ಹಾಗೂ ಪಾರಸ್ಪರಿಕತೆಗಳು ಸಮ್ಮಿಲನಗೊಳ್ಳುವ ಸಂಯುಕ್ತ ಸಂಕೀರ್ಣ. ಇಲ್ಲಿ ವ್ಯಕ್ತಿತ್ವ ಹಾಗೂ ಅಸ್ಮಿತೆಗಳು ಮನಸ್ಸಿನ ಮೇಲೆ ಪ್ರಭಾವ ಬೀರುತ್ತ, ಮನಸ್ಸು ಶರೀರವನ್ನು ಸೂತ್ರದ ಬೊಂಬೆಯಂತೆ ಕುಣಿಸುತ್ತದೆ.

ಹಳೆಯ ದಾಂಪತ್ಯದಲ್ಲೂ ಹೊಸತನ ಉಳಿಸಿಕೊಳ್ಳುವವರು ಇಳಿಯುತ್ತಿರುವ ಕಾಮಾಸಕ್ತಿ ಹಾಗೂ ಅತೃಪ್ತ ಕಾಮಕೂಟದ ಬಗೆಗೆ ಯೋಚಿಸುವಾಗ ಶರೀರವನ್ನಷ್ಟೇ ಅಲ್ಲದೆ ಮನಸ್ಸನ್ನೂ ವ್ಯಕ್ತಿತ್ವವನ್ನೂ, ಪರಸ್ಪರರ ಕ್ರಿಯೆ–ಪ್ರಕ್ರಿಯೆಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ, ಹಾಗೂ ಅದಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಹೀಗೆ ಕಾಮಕೂಟದಲ್ಲಿ ನವೀನತೆಯನ್ನು ಉಳಿಸಿಕೊಳ್ಳುತ್ತಾರೆ. ಇದರ ಬಗೆಗೆ ಹೆಚ್ಚಿನದನ್ನು ಮುಂದಿನ ಸಲ ತಿಳಿಯೋಣ.